ಬಂದು, ಕ್ರಿಕೆಟ್‌ನಲ್ಲಿ ಅಷ್ಟೊಂದು ಬಾಲುಗಳನ್ನು ಅದು ಹೇಗೆ ಎಸೆಯುತ್ತಾರೋ ಎಂದು ಅಚ್ಚರಿಪಟ್ಟರು. ಸುಸ್ತಾಗಿ ಮಲ್ಲೇಶಿಗೆ ಹೇಳಿದರು. ಆತನ ಕಲ್ಲೇಟು ಕಂಡ ಕೋತಿಗಳು ಮೈಮೇಲೇ ನುಗ್ಗಿಬರುವಂತೆ ಬಗ್ಗಿ, ಕುತ್ತಿಗೆಯೊಳಗಿನ ಗೋಲಿಗಾತ್ರದ ಗಂಟನ್ನು ಬದಿಗೊತ್ತಿ, ಕಚ್ಚಿಬಿಡುತ್ತೇನೆನ್ನುವಂತೆ ಹಲ್ಲುಕಿರಿದು ಗೊರ್ ಅನ್ನುತ್ತ ಆತನನ್ನೇ ಹೆದರಿಸಲಾರಂಭಿಸಿದವು. ಕೈಮಾತಿಗೆ ಇವು ಬಗ್ಗೊಲ್ಲ ಅಂತ ಕವಣೆ ತಂದು ದಪ್ಪದಪ್ಪ ಕಲ್ಲುಗಳನ್ನೇ ತೂರಲಾರಂಭಿಸಿದ. ಇದರಿಂದ ಇನ್ನಷ್ಟು ಕಾಯಿಪೀಚುಗಳು ಬಿದ್ದವೇ ಹೊರತು ಅವು ಮಾತ್ರ ಕಣ್ಣಿಗೂ ಕಾಣದೇ ಅಡಗಿಕೊಂಡವು. ಮಲ್ಲೇಶಿಗೆ ಹೆದರದ ಅವು ತನಗೆ ತನ್ನ ಪೊಜಿಷನ್ನಿಗೆ ಹೆದರುವುದು ಕಂಡು ಒಳಗೊಳಗೇ ಖುಷಿಯಾದರೂ, ತಾನು ವಾಕಿಂಗಿಗೆ ಹೋಗಿ ಬರುವುದರೊಳಗೆ ಎಲ್ಲವನ್ನೂ ನುಣ್ಣಗೆ ಬೋಳಿಸಿಬಿಡುತ್ತವಲ್ಲ ಎಂದು ಅವಲತ್ತುಕೊಂಡು ಅವತ್ತಿನ ವಾಕಿಂಗಿಗೆ ಚಕ್ಕರ್ ಹೊಡೆದು, ಅಂಗಡಿಯಿಂದ ಪಟಾಕಿ ತರಲು ಕಳಿಸಿದರು.

ಹಾಗೇ ತೋಟದ ತಲಹಿನ ಮೇಲೆ ಸಂಜೆ ತಿರುಗಾಟಕ್ಕೆ ಬಂದಿದ್ದ ಪ್ರೊ. ಕಾಳೇಶ್‌ರನ್ನ ಮಾತಿಗೆಳೆದರು. ಅವರು ತಮಗೆ ಮಾತನಾಡುವುದಕ್ಕಿಂತ ಮುಖ್ಯವಾದದ್ದು ಜಾಗಿಂಗು ಎನ್ನುವಂತೆ ನಿಂತಲ್ಲೇ ಬಿರುಸಿನ ಹೆಜ್ಜೆಯಲ್ಲಿ ಕುಣಿಯುತ್ತ ತಳಮಳಿಸುತ್ತಿದ್ದರು. 'ನಿಮ್ಮ ಹೆಸರೇನೋ ಯೂನಿವರ್ಸಿಟಿ ಕುಲಪತಿಗಳಿಗೆ ರೆಕಮೆಂಡ್ ಆಗಿದೆಯಂತೆ?... ನೀವು ಬಿಡಿಯಪ್ಪ, ರಾಜಕೀಯದಲ್ಲಿ ತುಂಬ ಪಳಗಿದವರು... ನಮ್ಮಂಗಲ್ಲ. ನಮಗೆ ನೋಡಿ ಯಾವ ಪ್ರಶಸ್ತಿನೂ ಬರಲ್ಲ, ಯಾರೂ ಯಾವ ಫಂಕ್ಷನ್ನಿಗೂ ಕರೆಯಲ್ಲ...' ಎಂದು ವ್ಯಂಗ್ಯದಿಂದ ಮೊನಚಿದರು. 'ಸಣ್ಣಪುಟ್ಟವೆಲ್ಲ ಬೇಡ, ನೆಕ್ಸ್ಟ್ ಜ್ಞಾನಪೀಠಕ್ಕೆ ನಿಮ್ಮನ್ನೇ ರೆಕಮೆಂಡ್ ಮಾಡೋಣ ಬಿಡಿ...' ಎಂದು ಕಾಳೇಶರೂ ಹರಿತವಾಗಿ ಕುಟುಕಿದರು. 'ಕೊಡ್ಲಿ. ಕೊಟ್ರೆ ಯಾರ್ ಬೇಡ ಅಂತಾರೆ... ಹೋಗ್ಲಿ ಈಗ ತಗಂಡೋರಿಗಿಂತಲೂ ನಾನೇನ್ ಕಮ್ಮಿ ಸಾಧನೇನ ಮಾಡಿದೀನಿ...' ಎಂದಾಗ ಕಾಳೇಶರಂಥ ಕಾಳೇಶರೇ ಮೂಗಿನ ಮೇಲೆ ಬೆರಳಿಟ್ಟುಕೊಂಡು, 'ಕೊಡಬೇಕಾದ್ದೇ ಬಿಡಿ...' ಎಂದು ಉಸುರಿದರು.

ಅಷ್ಟರಲ್ಲಿ ಅಲ್ಲಿಗೆ ಬಂದ ಐದಾರು ಜನರ ಗುಂಪೊಂದು, 'ಪಾವಂದಯ್ಯ ಅಂದರೆ ಯಾರ್ರೀ...' ಎಂದು ದಮಕಿಯ ಶೈಲಿಯಲ್ಲೇ ಕೇಳಿದರು. 'ನಾನೇ... ಯಾರ್ರೀ ನೀವೆಲ್ಲ?..' ಎಂದು ಗಾಬರಿಬಿದ್ದು ಕೇಳುವ ವೇಳೆಗೆ, ಅವರು ಕೂಲಾಗಿ ಪ್ರೊ. ಕಾಳೇಶರನ್ನ, 'ತಾವು ಹೊರಡಿ ಸಾರ್...' ಎಂದು ಗ್ರೀನ್‌ಸಿಗ್ನಲ್ ಕೊಟ್ಟು ಅವರನ್ನು ಬಚಾವು ಮಾಡಿಬಿಟ್ಟರು.

ಅವರು ಜಾಗಿಂಗ್‌ನಲ್ಲಿ ಇನ್ನಷ್ಟು ಬೆವರು ಸುರಿಸಲು ಮುನ್ನಡೆಯುತ್ತಲೇ, ಯಾರು, ಏನು, ಏಕೆ ಎಂದೇನೂ ಕೇಳದೇ ತಲಾಗೊಂದೊಂದು ಎಂದು ಪಾವಂದಯ್ಯನವರಿಗೆ ಬಡಿಯಲಾರಂಭಿಸಿದರು. 'ಅಯ್ಯಯ್ಯೋ... ಯಾಕ್ರೀ ಹೊಡೀತೀರ್ರೀ...' ಎಂದು ಇವರೂ ರಾಂಗ್ ಆಗುವ ಹೊತ್ತಿಗೆ, 'ಗವರ್ಮೆಂಟ್ ಪಾರ್ಕಲ್ಲಿ ದೇವಸ್ಥಾನ ಕಟ್ಟಿದ್ರೆ ನಿಮ್ಮಪ್ಪಂದೇನೋ ಕಳ್ಕಂತೀಯಾ... ಮೂಕರ್ಜಿ ಬರೀತೀಯೇನೋ...' ಎಂದು ಇನ್ನಷ್ಟು ಗೂಸಾ ಇಕ್ಕಿದರು. 'ಸುಪ್ರೀಂಕೋರ್ಟೇ ಆರ್ಡರ್ ಮಾಡಿಲ್ವೇನ್ರೀ, ಗವರ್ಮೆಂಟ್ ಜಾಗದಾಗೆ ದೇವಸ್ಥಾನ ಕಟ್ಟಬಾರದು ಅಂತ' ಅಂತ ಏನೇನೋ ಸಮಜಾಯಿಷಿ ನೀಡಲು ಹೋದರೆ, 'ಅದು ಹಳೇ ಗವರ್ಮೆಂಟ್‌ನಾಗೆ... ಈಗೇನಿದ್ದರೂ ನಮ್ಮದೇ ಗವರ್ಮಂಟು, ನಾವೇ ಸುಪ್ರೀಮು...' ಎಂದು ಮತ್ತೆ ಗದುಮಲಾರಂಭಿಸಿದರು. ಅಷ್ಟರಲ್ಲಿ ಅದೆಲ್ಲಿದ್ದಳೋ, ಆತನ ಹೆಂಡತಿ ಓಡಿಬಂದವಳು, 'ನಾನು ಬುದ್ಧಿ ಹೇಳ್ತೀನಿ ಬಿಡ್ರಣ್ಣ...' ಎಂದು ಕೈಕಾಲು ಕಟ್ಟಿ ಬಿಡಿಸಿಕೊಂಡಳು. ಅವರು ಅತ್ತ